ಇಷ್ಟು ಹೇಳುವ ಹೊತ್ತಿಗೆ ಕುಣಾಲ ಮೊಹಂತಿಯ ಕಣ್ಣುಗಳಲ್ಲಿನ ಪಸೆ ಹೆಚ್ಚಿತ್ತು.

'ಇರಲಿ... ನನ್ನ ಬಗ್ಗೆ ನಿಮಗೆ ಯಾರು ಹೇಳಿದ್ದು?' ಮಾತು ಮರೆಸುವ ಹಾಗೆ ಕೇಳಿದೆ. ನಾನಿರುವ ಮುಂಬೈಯಿಗೂ, ಈ ಕಟಕ್ ನಗರಕ್ಕೂ ಎರಡು ಸಮುದ್ರಗಳ ನಡುವಿನ ನೆಲದ ಅಂತರವಷ್ಟೆ? ಇಲ್ಲಿಯವರೆಗೂ ನನ್ನ ಹೆಸರು ಪಸರಿಸಿದೆಯೇ... ಎಂದೆಲ್ಲ ಯೋಚಿಸಿದೆ!

'ನಿಮ್ಮ ಬಗ್ಗೆ ಯಾರಿಗೆ ಗೊತ್ತಿಲ್ಲ, ಸರ್? ದೇಶದ ಹೈಸೊಸೈಟಿ ಸರ್ಕ್ಯೂಟ್‌ನಲ್ಲಿ ದಿಲೀಪ್ ಛಾಬ್ರಿಯಾ ಕಾರಿಗಿದ್ದ ಹಾಗೆ ಅಂತ್ಯಸಂಸ್ಕಾರಕ್ಕೆ ನೀವಲ್ಲವೇ?' ಅನ್ನುತ್ತ ಸಮಯೋಚಿತ ದುಃಖದ ಸಮಕ್ಕೂ ಕುಣಾಲ ಮೊಹಂತಿ ನಕ್ಕ. ಅವನು ಕೊಟ್ಟ ಹೋಲಿಕೆ ವಿಡಂಬನೆ ಅನ್ನಿಸಿತು.

ಕಾರು ಸಿಂಗರಿಸುವ ದಿಲೀಪ್ ಛಾಬ್ರಿಯಾನ ಹಾಗೆ ನಾನು ಹೆಣ ಸಿಂಗರಿಸುತ್ತೇನೆಯೆ... ಎಂದು ಕೇಳಬೇಕೆನಿಸಿತು. ಕೇಳಲಿಲ್ಲ!

'ಮಿಸ್ಟರ್ ಸತ್ಪತಿಯವರಿಗೆ ದೆಹಲಿಯ ರಾಜಕೀಯದಲ್ಲಿ ಸಾಕಷ್ಟು ಜನ ಗೊತ್ತು, ಸರ್... ಅವರ ಮೂಲಕ ನಿಮ್ಮ ಹೆಸರು ಕಿವಿಗೆ ಬಿತ್ತು...' ಎಂದು ಕುಣಾಲ ಮೊಹಂತಿ ಹೇಳಿದಾಗ, ಎಲ್ಲಿಂದೆಲ್ಲಿ ಮತ್ತು ಹೇಗೆ ಹೆಸರು ಹಬ್ಬುತ್ತದೆಂದು ಅಂದುಕೊಂಡೆ. 'ಅಲ್ಲದೆ, ಸರ್... ಕಾಶ್ಯಪಿಯವರೂ ನಿಮ್ಮ ಬಗ್ಗೆ ಸದಾ ಹೇಳುತಿದ್ದರು... ತಾನೇನಾದರೂ ಸತ್ತರೆ ನಿಮ್ಮನ್ನು ಕರೆಸಲೇಬೇಕೆಂದು ತಮಾಷೆ ಮಾಡುತಿದ್ದರು! ಆದರೆ ಹೀಗೊಂದು ಗಳಿಗೆ ಬರುತ್ತೆ ಅಂತ ನಾವು ಯಾರೂ ಅಂದುಕೊಂಡಿರಲಿಲ್ಲ, ಸರ್...' ಈ ಮಾತು ಮುಗಿಸುವ ಸುಮಾರಿಗೆ ಅವನು ಮತ್ತೊಮ್ಮೆ ಬಿಕ್ಕುವಾಗ, ಈ ಕಡೆಯ ಮಾತು ದುಗುಡದ ನಡುವೆಯೂ ತಮಾಷೆ ಅನ್ನಿಸಿತು!

'ಐಸೀ...' ಅಂತಂದೆ.

'ಯೆಸ್ ಸರ್... ಶಿ ವಾಸ್ ವೆರಿ ಪರ್ಟಿಕ್ಯುಲರ್ ಅಬೌಟ್ ಸಂಸ್ಕಾರ್‌ರೈಟ್ಸ್...'

ಈಗಲಂತೂ ತಮಾಷೆ ವಿಚಿತ್ರವೆನ್ನಿಸಿತು! ಹೀಗೂ ಉಂಟೆ?! ಹುಹ್... ಮಾತು ಬೆಳೆಸದೆ ಸುಮ್ಮನಾದೆ.

'ಸರ್... ಮೇಡಂ ಹಣೆಯ ಮೇಲೆ ದೊಡ್ಡ ಗಾಯ ಆಗಿದೆ... ಆಕ್ಚುಅಲೀ ಗಾಯ ಅಲ್ಲ ಮೂಗೇಟು. ಒಂದಷ್ಟು ಊತ ಇದೆ... ಸರಿ ಮಾಡಬಹುದಲ್ಲವಾ?'

ವೈದ್ಯರೆದುರು ಇದು ವಾಸಿಯಾಗುತ್ತಲ್ಲವಾ... ಎಂದು ಕಾಳಜಿಯಿಟ್ಟು ಕೇಳುವ ರೋಗಿಯ ಮಾತಿನ ಹಾಗಿತ್ತು, ಕುಣಾಲ ಮೊಹಂತಿಯ ಪ್ರಶ್ನೆ. ನಸುನಕ್ಕು, 'ಆಕೆಯನ್ನ ನೋಡೋವರೆಗೂ ಏನೂ ಹೇಳಲಾರೆ...' ಅಂತಂದು, 'ಅದಿರಲಿ ವಾಟ್ ಡಸ್ ಯುವರ್ ಬಾಸ್ ಡೂ?' ಎಂದು ಕೇಳಿದೆ.

ತನ್ನ ಧಣಿ ಹಿಮಾದ್ರಿ ಸತ್ಪತಿ ಇಡೀ ಒರಿಸ್ಸಾದ ಕೈಗಾರಿಕಾಕ್ಷೇತ್ರದಲ್ಲಿ ದೊಡ್ಡ ಹೆಸರೆಂದು ಕುಣಾಲ ಮೊಹಂತಿ ದೊಡ್ಡ ಕಥನವನ್ನೇ ಸುರುವಿಟ್ಟುಕೊಂಡ.

## 6

ಇಪ್ಪತ್ತು ಮಿನಿಟುಗಳಲ್ಲಿ ಆಸ್ಪತ್ರೆ ಸೇರಿದೆವು. 'ಬನ್ನಿ ಬನ್ನಿ... ನಿಮಗೇ ಕಾಯುತಿದ್ದಿವಿ...' ಅನ್ನುತ್ತ ಕೊಂಚ ಮುಡಿ ನೆರೆತಿದ್ದ ವ್ಯಕ್ತಿ ಎದುರಾದಾಗ, ಈತನೇ ಮಿಸ್ಟರ್ ಸತ್ಪತಿ ಅಂತನಿಸಿದ್ದು ನಿಜವಾಯಿತು. ಈ ಹಿಮಾದ್ರಿ ಸತ್ಪತಿಯ ಸುತ್ತಲೂ ಒಂದಷ್ಟು ಆಪ್ತೇಷ್ಟ ಮಂದಿಯಿದ್ದರು. ಮಾತಿರದ ದುಮ್ಮಾನ ತೊಟ್ಟು ನೆರೆದಿದ್ದರು. ವಿಚಿತ್ರವೆಂದರೆ ಒಂದೊಬ್ಬ ಹೆಣ್ಣು ಚಹರೆಯೂ ಅಲ್ಲಿರಲಿಲ್ಲ! ಏನೋ ಗುಟ್ಟು ಮಾಡುತ್ತಿದ್ದಂತನ್ನಿಸಿತು. ಏನೂ ಬಿಗಿ... ಮತ್ತು ಬಿಗುಮಾನ....

ಹಿಮಾದ್ರಿ ಸತ್ಪತಿಗೆ ಹೆಚ್ಚುಕಮ್ಮಿ ನನ್ನದೇ ವಯಸ್ಸೆಂದುಕೊಂಡೆ. ಮುಖದಲ್ಲಿ ಬಾಡಿದ ಹೂವಂತಹ ಮ್ಲಾನವಿತ್ತು. ವಿಯೋಗವನ್ನೂ ದುಃಖವನ್ನೂ... ಒಡನೆ ಇನ್ನೇನನ್ನೋ... ಒಟ್ಟೊಟ್ಟಿಗೆ ಸೆಣಸಿದ್ದಾನಂತನ್ನಿಸಿತು. ಇಷ್ಟಿದ್ದೂ ಆಪ್ತವಾಗಿ ಮಾತಿಗಿಳಿದಿದ್ದು ಆಶ್ಚರ್ಯ ಹುಟ್ಟಿಸಿತು. 'ಇನ್ನೂ ಸಾವಿನ